


International Journal of Kannada Research
www.kannadajournal.com

ISSN: 2454–5813
IJKR 2023; 9(3): 117-120
© 2023 IJKR
www.kannadajournal.com
Received: 02-07-2023
Accepted: 06-08-2023

**ಡಾ.ಮಲ್ಲಿಕಾರ್ಜುನ ಕೆ.**
ಸಹ ಪ್ರಾಧ್ಯಾಪಕರು
ಡಾ. ಎಂ. ಚಿದಾನಂದಮೂರ್ತಿ ಸಂಶೋಧನ ಕೇಂದ್ರ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಜಿಲ್ಲೆ, ಕರ್ನಾಟಕ, ಮೊಬೈಲ್, ಭಾರತ

**Corresponding Author:**
**ಡಾ.ಮಲ್ಲಿಕಾರ್ಜುನ ಕೆ.**
ಸಹ ಪ್ರಾಧ್ಯಾಪಕರು
ಡಾ. ಎಂ. ಚಿದಾನಂದಮೂರ್ತಿ ಸಂಶೋಧನ ಕೇಂದ್ರ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಜಿಲ್ಲೆ, ಕರ್ನಾಟಕ, ಮೊಬೈಲ್, ಭಾರತ

# ಶರಣರ ದಾಸೋಹ ಪರಿಕಲ್ಪನೆ

**ಡಾ.ಮಲ್ಲಿಕಾರ್ಜುನ ಕೆ.**

**ಪೀಠಿಕೆ**

ಶಿವಾನುಭವದಲ್ಲಿ ದಾಸೋಹಕ್ಕೆ ಬಹಳ ಮಹತ್ವದ ಸ್ಥಾನವಿದೆ. ಹಿಂದಿನ ಎಲ್ಲ ಶಿವಶರಣರೂ ದಾಸೋಹಿಗಳಾಗಿದ್ದರೆಂದು ಅವರ ಚರಿತ್ರೆಗಳಲ್ಲಿ ವರ್ಣನೆಗಳಿವೆ. ಅವರು ಲಿಂಗಭೋಗೋಪಭೋಗಿಗಳಾಗಿ ತಾವು ದುಡಿದುದ್ದನ್ನು ಅರ್ಪಣ ಭಾವದಿಂದ ಗುರು ಲಿಂಗ ಜಂಗಮಗಳ ದಾಸೋಹಕ್ಕೆ ಅರ್ಪಿಸುತ್ತಾರೆ. ಭಕ್ತನು ತನಗಿರುವುದೆಲ್ಲ ಶಿವನ ಸೊಮ್ಮು ಎಂದು ಭಾವಿಸಿ ಅದನ್ನು ಅವನು ಪರಮಾತ್ಮನಿಗೆ ಮೊದಲು ಅರ್ಪಿಸಬೇಕು. ಅದು ಹೀಗೆ ಅರ್ಪಿತವಾದ ಬಳಿಕ ಅದು ಪ್ರಸಾದವಾಗುತ್ತದೆ. ಈ ಪ್ರಸಾದದಲ್ಲಿ ಯಾವುದು ಅರ್ಪಣಯುಕ್ತ ಕ್ರಿಯೆಯೋ ಅದೇ ದಾಸೋಹವೆನಿಸಿಕೊಳ್ಳುತ್ತದೆ. ದಾಸೋಹದಲ್ಲಿ ದಾಸನು, ಕಿಂಕರನು ಎಂಬ ಭಾವವಿರಬೇಕು. ಇದು ಸೇವಾ ಭಾವವು ಅಥವಾ ಭೃತ್ಯಾಚಾರವು. ಈ ಸಮಾಜ ಸೇವಾ ಬುದ್ಧಿಯು ಇಲ್ಲದೆ ಹೋದರೆ ಅವನು ಭಕ್ತನಾಗಲಾರ, ಶರಣನಂತೂ ಖಂಡಿತ ಆಗಲಾರ.

ಮನುಷ್ಯನಿಗೆ ತನು, ಮನ, ಧನ ಅಥವಾ ಲಿಂಗ, ಭಾವ ಎಂಬುವುಗಳಿವೆಯಷ್ಟೇ. ಅವುಗಳನ್ನು ಅವನು ಗುರು ಲಿಂಗ ಜಂಗಮಕ್ಕೆ ಅನುಕ್ರಮವಾಗಿ ಅರ್ಪಿಸತಕ್ಕದ್ದು. ಹೀಗೆ ಅರ್ಪಿಸುವದೇ ದಾಸೋಹಿಯ ಆಚರಣೆಯಾಗಿರುತ್ತದೆ. ಇಂಥ ಆಚರಣೆಯಿಂದ ಲಿಂಗ, ಮನ, ಭಾವಗಳಲ್ಲಿ ತ್ರಿಲಿಂಗಗಳು ಅಂದರೆ ಇಷ್ಟ, ಪ್ರಾಣ, ಭಾವಲಿಂಗಗಳು ಅನುಕ್ರಮವಾಗಿ ನೆಲೆಗೊಳ್ಳುತ್ತವೆ.

ಇವುಗಳ ಉಪಯೋಗವನ್ನು ಪ್ರತಿಯೊಬ್ಬನು ಆತ್ಮೋದ್ಧಾರಕ್ಕೂ ಸಮಾಜೋದ್ಧಾರಕ್ಕೂ ದಾಸಭಾವದಿಂದ ಮಾಡಬೇಕೆಂಬುದೇ ದಾಸೋಹದ ಪರಿಕಲ್ಪನೆಯಾಗಿದೆ. ವೀರಶೈವ ಮಠಗಳ ಕಾರ್ಯವು ಭಕ್ತರು ಮಾಡುವ ದಾಸೋಹ ಕಾರ್ಯಗಳನ್ನು ಕೈಕೊಂಡು ಅವುಗಳಿಗೆ ಪ್ರತಿಯಾಗಿ ಭಕ್ತರನ್ನೂ ಸಮಾಜವನ್ನೂ ಉದ್ಧಾರ ಮಾಡುವುದಾಗಿರುತ್ತದೆ. ಹಿಂದಿನ ಕಾಲದಲ್ಲಿ ಮಠಗಳು ಇಂಥ ಕಾರ್ಯವನ್ನು ಮಾಡುತ್ತಾ ಬಂದವು. ಆದ್ದರಿಂದ ಆಗ ಶಿವಶರಣರು ತಮಗೆ ಹೆಚ್ಚಾಗಿ ಉಳಿದಿದ್ದನ್ನೆಲ್ಲ ಇವುಗಳಿಗೆ ಆನಂದದಿಂದ ಸಲ್ಲಿಸುತ್ತಿದ್ದರು. ಈ ರೀತಿ ಸಲ್ಲಿಸಿದ ಶಿವಶರಣರ ಚರಿತ್ರೆಗಳು ಜನಪದ ಶರಣ ಕಾವ್ಯಗಳಲ್ಲಿ ಹಲವಾರಿವೆ.

ಶರಣೆ ನೀಲಮ್ಮ ಗುರುಮಠದಲ್ಲಿ ನಿತ್ಯ ದಾಸೋಹ ಕಾರ್ಯವನ್ನು ಮಾಡುತ್ತಿದ್ದುದಕ್ಕೆ 'ಘನಶರಣ ಹರಳಯ್ಯ' ಕಾವ್ಯದಲ್ಲಿ ಹೀಗೆ ವ್ಯಕ್ತಪಡಿಸಲಾಗಿದೆ.

"ಒಕ್ಕಳಕ್ಕಿ ಹಾಕಿ ಒಂದ್ಮಾನ ಬ್ಯಾಳೆ ಹಾಕಿ
ಒಂದು ಬದನೆಕಾಯಿ ಚಿತ್ತುರಿಸಿ ಆ ತಾಯಿ
ಲಕ್ಕಸ್ದ ಮ್ಯಾಲೆ ತೊಂಬತ್ತಾರು ಸಾವುರ ಕೋಟಿ ।
ಗಣಂಗಳಿಗೆ ಊಟುಕೆ ಪಡುಸಿ ಆ ತಾಯಿ
ಮಿಕ್ಕೊಕ್ಕುವ ಪರುಸಾದವನು ತಂದು ।
ಮಿಕ್ಕೊಕ್ಕುದ ಪರಸಾದವನು ಕಲ್ಲು ಬಂಡೀಗೆ ಕಟ್ಟಿ
ಕಲ್ಯಾಣ್ದ ಬಾಗುಲ್ಗೆ ಹೊಡ್ಸುವರಂತೆ ।"[1]

ಹೀಗೆ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಕೋಟಿ ಗಣಂಗಳಿಗೆ ಪ್ರಸಾದವನ್ನು ಒದಗಿಸುವ ಮೂಲಕ ಮಿಕ್ಕ ಪ್ರಸಾದವನ್ನು ಕಲ್ಯಾಣದ ಬಾಗಿಲಲ್ಲಿ ಇಟ್ಟು ಕಲ್ಯಾಣಕ್ಕೆ ಬಂದು ಹೋಗುವವರಿಗೆ ಪ್ರಸಾದವನ್ನು ನೀಡುವಂತಹ ದಾಸೋಹ ಕಾರ್ಯವನ್ನು ನೀಲಮ್ಮ ಮಾಡುತ್ತಿದ್ದಳೆಂದು ತಿಳಿದುಬರುತ್ತದೆ.

'ತುರುಕರ ಪೀರಣ್ಣ' ಕಾವ್ಯದಲ್ಲಿ ನೀಲಮ್ಮನು ದಾಸೋಹ ಕಾರ್ಯವನ್ನು ಮಾಡುವುದನ್ನು ಈ ರೀತಿ ವ್ಯಕ್ತಪಡಿಸಲಾಗಿದೆ.

"ಶಿವಶರಣೆ ನೀಲಮ್ಮಯ್ಯ
ಒಕ್ಕಕ್ಕಿಯ ಹಾಕಿ
ಒಂದು ಬದ್ನೆ ಕಾಯಾಕಿ
ಲಕ್ಕುಸ್ದ ತೊಂಬತ್ತಾರು ಕೋಟಿ
ಸರಣ ಮಾತ್ಮುರುಗೆಲ್ಲ
ನಿಚ್ಚು ಬೋಜ್ಣೆ ಮಾಡುತಾರೆ
ಮಿಕ್ಕೀದ ಪರಸಾದ್ವ
ಕಲ್ಗುಂಡಿಗೇರುತಾರೆ
ಕೈಲಾಸ್ದ ಒಳ್ಗೆ ಶಿವ
ಒಂದ್ – ಕಂದ್ಕದ್ ಬಾವಿ ತೋಡುಸ್ತಾರೆ
ಕಂದ್ಕದ್ ಬಾವಿಗೋಗಿ
ಮಿಕ್ಕುದ್ ಪರ್ಸಾದ ಸುರ್ದರಂತೆ"[೨]

ನೀಲಮ್ಮನು ಪ್ರತಿ ದಿನವೂ ಲಕ್ಷದ ತೊಂಬತ್ತಾರು ಕೋಟಿ ಶರಣರಿಗೆ ನಿತ್ಯ ಪ್ರಸಾದವನ್ನು ನೀಡುವ ಕಾಯಕವನ್ನು ಮಾಡಿಕೊಂಡಿದ್ದರು. ಇವರಿಗೆ ಹಂಚಿ ಮಿಕ್ಕ ಪ್ರಸಾದವನ್ನು ಕಂದಕದ ಬಾವಿಗೆ ಸುರಿಯುತ್ತಿದ್ದರು. ಹೀಗೆ ಶರಣರು ಪ್ರಸಾದವನ್ನು ಮಾಡುವಂತಹ ಸಂದರ್ಭದಲ್ಲಿ ಮಿಕ್ಕ ಪ್ರಸಾದವನ್ನು ಯಾರ ಕಾಲಿಗೆ ತಾಕದಂತೆ, ಬಾವಿಯೊಳಗಿನ ಸಣ್ಣಪುಟ್ಟ ಪ್ರಾಣಿಗಳಿಗೆ ಆಹಾರವನ್ನು ಒದಗಿಸುವಂತ ಕಾರ್ಯವನ್ನು ಮಾಡುತ್ತಿದ್ದರೆಂದು ತಿಳಿದುಬರುತ್ತದೆ.
'ನುಲುಗೆ ಚಂದಯ್ಯ' ಕಾವ್ಯದಲ್ಲಿ ಚನ್ನಯ್ಯನು ಕಾಡಿಗೆ ಹೋಗಿ ಮೆದೆಯ ಹುಲ್ಲನ್ನು ಕೊಯ್ದು ತಂದು ಅದನ್ನು ನೇಯ್ದು, ಹಗ್ಗಮಾಡಿ ಮಾರಿ ಬಂದ ಹಣದಿಂದ ಶರಣರಿಗೆ ದಾಸೋಹ ಕಾರ್ಯ ಮಾಡುತ್ತಿದ್ದನೆಂದು ತಿಳಿದುಬರುತ್ತದೆ.
'ಗಟ್ಟಿವಾಳಯ್ಯ' ಕಾವ್ಯದಲ್ಲಿ ಗಟ್ಟಿವಾಳಯ್ಯನು ಪ್ರತಿನಿತ್ಯ ವಿಭೂತಿ ಗಟ್ಟಿಗಳನ್ನು ತಯಾರಿಸುವ ಕಾಯಕವನ್ನು ಮಾಡುತ್ತಿದ್ದನು. ಅದನ್ನು ಮಾರಿ ಬರುತ್ತಿದ್ದ ಮೂರು ಪಾವು ಅಕ್ಕಿಯಲ್ಲಿ ಒಂದು ಪಾವು ತನಗೆ, ಮತ್ತೊಂದು ಹೆಂಡತಿಗೆ, ಮಗದೊಂದು ಪಾವು ದಾಸೋಹಕ್ಕೆಂದು ಬಳಸುತ್ತಿದ್ದುದು, ಶಿವಶರಣರು ತಮಗೆ ಹೆಚ್ಚಾಗಿ ಉಳಿದಿದ್ದನ್ನೆಲ್ಲ ದಾಸೋಹಕ್ಕೆ ಆನಂದದಿಂದ ಸಲ್ಲಿಸುತ್ತಿದ್ದರೆಂದು ತಿಳಿದುಬರುತ್ತದೆ.
'ಅಕ್ಕನಾಗಮ್ಮ' ಕಾವ್ಯದಲ್ಲಿ ನೀಲಮ್ಮಳ ದಾಸೋಹ ಪರಿಕಲ್ಪನೆಯನ್ನು ಕುರಿತು ಹೀಗೆ ಹೇಳಲಾಗಿದೆ.

"ಒಕ್ಕುಳಕ್ಕಿ ಹಾಕಿ ಒಂದ್ಮಾನ ಬೇಳೆ ಹಾಕಿ
ಕೋಟಿ ಜಂಗಮರೀಗೆ ಊಟಕ್ಕೆರುದವುರೀಗೆ ।
ಮಿಕ್ಕುದನ್ನವ ಕಲ್ಲುಬಂಡಿಯ ಕಟ್ಟಿ
ಕಲ್ಯಾಣ್ದ ಬಾಗುಲ್ಗೆ ಹೂಡಸ್ತುಂತ ನೀಲಮ್ಮ ತಾಯಿಗೆ"[೩]

ನೀಲಮ್ಮನು ಒಂದು ಕೊಳಗ ಅಕ್ಕಿ, ಎಂಟು ಸೇರು ಬೇಳೆಯನ್ನು ಹಾಕಿ ಕೋಟಿ ಜಂಗಮರಿಗೆ ದಾಸೋಹವನ್ನು ಮಾಡುತ್ತಿದ್ದಳೆಂದು ತಿಳಿದು ಬರುತ್ತದೆ. ಇದು ಅಸಾಧ್ಯವಾದರೂ ಅವಳ ಸಾತ್ವಿಕ ಭಕ್ತಿ ಈ ಕಾರ್ಯವನ್ನು ನೆರವೇರಿಸಲು ಅನುವುಮಾಡಿಕೊಡುತ್ತಿತ್ತು ಎಂದು ಹೇಳಬಹುದು.
'ಕುಂಬಾರ ಗುಂಡಯ್ಯ-೧' ಕಾವ್ಯದಲ್ಲಿ ಗುಂಡಯ್ಯನ ದಾಸೋಹದ ಪರಿಯನ್ನು ಹೀಗೆ ಹೇಳಲಾಗಿದೆ.

"ಅಣ್ಣಾವ್ರು ಒಪ್ಪಾದಿಲ್ಲ
ಅಂತ್ಹೇಳಿ ಗುಂಡಯ್ಯ
ಉಲುಪಿಯ ಹಣವನ್ನು
ಕಣ್ಣೀಗೆ ಒತ್ತುಕೊಂಡು
ದಾಸೋವಾಕಯ್ತದಂತ
ಮಡ್ಡಿ ಕೈಗೆ ಕೊಟ್ಟಾರು ।"[೪]

ಬಸವಣ್ಣನವರು ಮಣ್ಣಿನ ಕರಡಿಕೆಗಳನ್ನು ಮಾಡಲು ಗುಂಡಯ್ಯನಿಗೆ ಉಲುಪಿಯನ್ನು ಕೊಡುವರು. ಆದರೆ ಅದನ್ನು ಗುಂಡಯ್ಯ ನಿರಾಕರಿಸಿದರೂ ಬಸವಣ್ಣನವರು ಕೊಟ್ಟಾಗ ಅದನ್ನು ಕಣ್ಣಿಗೆ ಒತ್ತಿಕೊಂಡು, ಈ ಹಣ ದಾಸೋಹಕ್ಕಾಯಿತು ಎಂದು ಹೇಳುವನು. ಇದರಿಂದ ಶರಣರು ಕಾಯಕದಿಂದ ಬಂದ ಹಣವನ್ನು ದಾಸೋಹ ಕಾರ್ಯಕ್ಕಾಗಿ ಬಳಸುತ್ತಿದ್ದರೆಂದು ಈ ಕಾವ್ಯದಿಂದ ತಿಳಿದು ಬರುತ್ತದೆ.
'ಕುಂಬಾರ ಗುಂಡಯ್ಯ-೨' ಕಾವ್ಯದಲ್ಲಿ ನೀಲಮ್ಮಳ ದಾಸೋಹ ನಿಷ್ಠೆ ಹೀಗೆ ವ್ಯಕ್ತಪಡಿಸಲಾಗಿದೆ.

"ಒಕ್ಕ ಅಕ್ಕಿ ಹಾಕಿ ಒಂದ್ಮಾನ ಬ್ಯಾಳೆ ಹಾಕಿ
ಒಂದು ಬದನೆಕಾಯಾಕಿ
ಲಕ್ಕುಸದ ಮೇಲೆ ತೊಂಬತ್ತೇಳು ಕೋಟಿ
ಗಣಂಗಳಿಗೆ ನಿಚ್ಚು ಭೋಜಣೆ ಮಾಡ್ಸಿ
ಮಿಕ್ಕಿದ ಪರ್ಸಾದವ ಕಲ್ಲುಬಂಡಿಗೆ ತುಂಬಿ
ಕೈಲಾಸ್ಕೆ ಕಳಿಸಿದಂತ ನೀಲಮ್ಮ ತಾಯಿ ಪಾದಂಗಳಿಗೆ"[೫]

ನೀಲಮ್ಮನು ಲಕ್ಷದ ಮೇಲೆ ತೊಂಬತ್ತೇಳು ಕೋಟಿ ಗಣಂಗಳಿಗೆ ಭೋಜನವನ್ನು ತಯಾರಿಸಿ ನಿತ್ಯ ದಾಸೋಹವನ್ನು ಮಾಡುತ್ತಿದ್ದಳೆಂದು, ಮಿಕ್ಕಿದ ಪ್ರಸಾದವನ್ನು ಕೈಲಾಸಕ್ಕೆ ಕಳುಹಿಸಿಕೊಡುತ್ತಿದ್ದಳೆಂದು ಈ ಕಾವ್ಯದಿಂದ ತಿಳಿದುಬರುತ್ತದೆ.

'ಗಾಣಿಗರ ಕಲ್ಲಯ್ಯ' ಕಾವ್ಯದಲ್ಲಿ –
"ಪರಮಾತ್ಮನ ಶಿವುಲಿಂಗಕೆ ಎಣುಮಜ್ಜಣ ಮಾಡಿ
ಉಳಿದಂತ ಎಣ್ಣೆಯ ಊರ್ಗೆಲ್ಲ ಮಾರೋದು
ಮಾರಿ ಬಂದ ಲಾಭದಲ್ಲಿ
ಶರಣರ ಭಿನ್ನಾಕೆ ಕರ್ದು
ಅವುರ ಸ್ಯೇವೆ ಮಾಡೋದು"[೬]

ಇಲ್ಲಿ ಕಲ್ಲಯ್ಯನು ಗಾಣದಿಂದ ಎಣ್ಣೆಯನ್ನು ತೆಗೆದು, ಎಣ್ಣೆಯಿಂದ ಪರಮಾತ್ಮನಿಗೆ ಎಣ್ಣೆ ಸ್ನಾನವನ್ನು ಮಾಡಿ, ಉಳಿದ ಎಣ್ಣೆಯನ್ನು ಊರಿನಲ್ಲಿ ಮಾರಿ ಬಂದ ಹಣದಿಂದ ಶರಣರಿಗೆ ದಾಸೋಹ ಕಾರ್ಯವನ್ನು ಮಾಡಿಕೊಂಡು ಹೋಗುತ್ತಿದ್ದನೆಂದು ಈ ಕಾವ್ಯದಿಂದ ತಿಳಿದುಬರುತ್ತದೆ.
'ಕರಪಾಲ ಬಸವ ಪುರಾಣ' ಕಾವ್ಯದಲ್ಲಿ ದಾಸೋಹದ ಮಹತಿಯನ್ನು ಹೀಗೆ ವ್ಯಕ್ತಪಡಿಸಲಾಗಿದೆ.

"ಹಸಿದು ಬಂದವರಿಗೆ ಅನ್ನವ ನೀಡಬೇಕು
ಶಿಶುಗಳಿಗೆ ಹಾಲ್ಬೆಣ್ಣ ಕೊಡಬೇಕು ತಾಯೆ
ಕೊಡಬೇಕು ತಾಯೆ ।"[೭]

ಹಸಿವಿನಿಂದ ಬಳಲಿ ಬಂದವರಿಗೆ ಅನ್ನವನ್ನು ನೀಡಬೇಕು ಹಾಗೆಯೇ ಮಕ್ಕಳಿಗೆ ಹಾಲು ಬೆಣ್ಣೆಯನ್ನು ನೀಡುವಂತ ಶುದ್ಧ ದಾಸೋಹವನ್ನು ಮಾಡಿಕೊಂಡಿರಬೇಕು. ಹೀಗೆ ಮಾಡದಿದ್ದರೆ

ದಾಸೋಹಕ್ಕೆ ಅಪಚಾರ ಮಾಡಿದಂತೆ ಎಂಬ ಶರಣ ಪರಿಕಲ್ಪನೆ ಜನಪದರಲ್ಲಿ ಬೇರೂರಿರುವುದನ್ನು ಈ ಕಾವ್ಯದಲ್ಲಿ ವ್ಯಕ್ತಪಡಿಸಲಾಗಿದೆ.
'ಕರಪಾಲ ಬಸವ ಪುರಾಣ' ಕಾವ್ಯದಲ್ಲಿ ನುಲಿಗೆ ಚಂದಯ್ಯನು ಕಾಡಿನಿಂದ ತಂದ ನಾರಿನ ಮರದ ತೊಗಟೆಯಿಂದ ನಾರನ್ನು ತೆಗೆದು ಹಗ್ಗವನ್ನು ಹೊಸೆದು ಮಾರಿ ಬಂದ ಹಣದಿಂದ ಜಂಗಮರಿಗೆ ದಾಸೋಹವನ್ನು ಮಾಡಿ ಮಿಕ್ಕ ಹಣದಿಂದ ದಂಪತಿಗಳೀರ್ವರೂ ಅವರ ಜೀವನೋಪಾಯವನ್ನು ಮಾಡಿಕೊಳ್ಳುತ್ತಿದ್ದರೆಂದು ತಿಳಿದುಬರುತ್ತದೆ.

'ಮೈದಾಳ ರಾಮಯ್ಯ' ಕಾವ್ಯದಲ್ಲಿ
"ಹಾಲು ಸಕ್ಕರೆ ಮೊಸರು ತುಪ್ಪ ಜೇನುಗಳ ಹಾಕಿ
ದ್ರಾಕ್ಷಿ ಕರ್ಜೂರ ಕಲ್ಸಕ್ರೆ ಕೊಪ್ರಿಗಳ ಹಾಕಿ
ಪಂಚಾಮ್ರುತ ಪಾಲು ಪರ್ಸಾದಗಳ ಮಾಡ್ಕೊಂಡು
ಎಡೆಪಡುಸೋದಕ್ಕೆ ಪರಮಾತ್ಮನನ್ನು ಕಾಯ್ತಾ ಇದ್ದಾರೆ"[೮]

ಭಕ್ತನಾದವನು ತನ್ನ ಆರಾಧ್ಯ ದೈವಕ್ಕೆ ಪ್ರಸಾದವನ್ನು ಹಿಡಿಯಬೇಕು ತದನಂತರ ಪ್ರಸಾದವನ್ನು ಸ್ವೀಕರಿಸಬೇಕು. ಇಂಥ ಆಚರಣೆಯಿಂದ ಲಿಂಗ, ಮನ, ಭಾವವೆಂಬ ತ್ರಿಲಿಂಗಗಳಲ್ಲಿ ಅನುಕ್ರಮವಾಗಿ ನೆಲೆಗೊಳ್ಳುತ್ತವೆ ಎಂಬ ನಂಬಿಕೆ ಜನಪದರಲ್ಲಿ ಇರುವುದನ್ನು ಈ ಕಾವ್ಯದಲ್ಲಿ ಕಾಣುತ್ತೇವೆ.
'ಗುಂಡು ಬ್ರಹ್ಮಯ್ಯ' ಕಾವ್ಯದಲ್ಲಿ ಗುಂಡಯ್ಯನ ದಾಸೋಹ ಕಾರ್ಯವನ್ನು ಕುರಿತು ಹೀಗೆ ಹೇಳಲಾಗಿದೆ.

"ಅನ್ನಪಡಿ ನಡುಸ್ಬುಟ್ಟು ಬರುತೀನಿ ಅಂತ್ಹೇಳಿ
ಅನ್ನದ ಕರುತು ಬರುತಾರೆ ।
ಇರನೂರೆಂಬತ್ತು ಕೋಟಿ ಜೀವರಾಸ್ಯಗಳ್ಗೆಲ್ಲ
ಲಕ್ಷೋಪಲಕ್ಷಿ ಜೀವುಕೆಲ್ಲ ಅನ್ನ ನೀಡಿದ್ದಾರೆ"[೯]

ಇಲ್ಲಿ ಗುಂಡು ಬ್ರಹ್ಮಯ್ಯನು ನೂರೆಂಬತ್ತು ಕೋಟಿ ಇರುವೆಗಳಿಗೆ ಹಾಗೂ ಲಕ್ಷೋಪಲಕ್ಷ ಜೀವಗಳಿಗೆಲ್ಲ ಅನ್ನ ಉಣಿಸುವ ದಾಸೋಹ ಕಾರ್ಯವನ್ನು ಮಾಡಿಕೊಂಡು ಬರುತ್ತಿದ್ದನು. ಅವುಗಳಿಗೆ ಉಣಬಡಿಸದೇ ತಾನು ಊಟವನ್ನು ಮಾಡುತ್ತಿರಲಿಲ್ಲ ಎಂಬಲ್ಲಿ ಗುಂಡಯ್ಯನ ದಾಸೋಹನಿಷ್ಠೆ ಈ ಕಾವ್ಯದಿಂದ ತಿಳಿದುಬರುತ್ತದೆ.
'ಹೇಮರೆಡ್ಡಿ ಮಲ್ಲಮ್ಮ' ಕಾವ್ಯದಲ್ಲಿ ಮಲ್ಲಮ್ಮನ ದಾಸೋಹ ಕಾರ್ಯವನ್ನು ಸತ್ವ ಪರೀಕ್ಷೆಯ ಮೂಲಕ ಹೀಗೆ ಬಿಂಬಿಸಿದ್ದಾರೆ.

"ಸಿರಿಗಿರಿ ಪರುವತದಲ್ಲಿ
ಸೇರಿದ್ದ ಸರಣರಿಗೆಲ್ಲ
ಲಿಂಗ ಜಂಗಮರಿಗೆಲ್ಲ
ಲಕ್ಷದೊಂಬತ್ತ ಕೋಟಿಗೂ
ಊಟ ಭೋಜಣೆ ಮಾಡಬೇಕು
ಅನುತ್ಹೇಳಿ ಮಲ್ಲಮ್ಮದೇವಿ
ಲಕ್ಷದತೊಂಬತ್ತಾರು ಕೋಟಿಗೆ
ಅವ–ಪತ್ರದ ಎಲೆಯ ಕೊಡುತವುಳೆ
ಪತ್ರದ ಎಲೆಯ ಕೊಟ್ಟುಬಿಟ್ಟು
ಅವ – ಊಟ ಭೋಜುಣೆ ನೀಡುತವುಳೆ
ಊಟ ಭೋಜುಣೆ ನೀಡುತವುಳೆ
ಊಟ ಭೋಜುಣೆ ನೀಡಿಬುಟ್ಟು
ತಾಯಿ ಮಲ್ಲಯ್ನ ನೆನದಳಂತೆ
ಮಲ್ಲಿಕಾರ್ಜುನ ಸ್ವಾಮಿಯವರು
ಪ್ರತ್ಯೇಕ್ಷೆಯಾಗಿ ಬಂದು ನಿಂತು
ಮಲ್ಲಮ್ಮ ಸರಣೆಯ ಜೊತೆಯಲ್ಲಿ
ಅಲ್ಲಿದ್ದ ಮಾತ್ಮರುಗಳನೆಲ್ಲ
ಕೈಲಾಸ್ಕೆ ಕರ್ಕೊಂಡೋದರಂತೆ"[೧೦]

ಮಲ್ಲಮ್ಮ ಶ್ರೀಶೈಲ ಪರ್ವತದ ಮಲ್ಲಯ್ಯನ ಸನ್ನಿದಿಯಲ್ಲಿ ಶರಣರಿಗೆ, ಲಿಂಗ ಜಂಗಮರು ಮೊದಲಾದ ಲಕ್ಷದೊಂಬತ್ತು ಕೋಟಿ ಜನರಿಗೆ ದಾಸೋಹ ಕಾರ್ಯವನ್ನು ಕೈಗೊಂಡಿದ್ದರಿಂದ ಮಲ್ಲಯ್ಯನು ಪ್ರತ್ಯಕ್ಷನಾಗಿ ಮಲ್ಲಮ್ಮನ ಜೊತೆಯಲ್ಲಿ ಅಲ್ಲಿದ್ದ ಮಹಾತ್ಮರನ್ನೊಳಗೊಂಡು ಕೈಲಾಸಕ್ಕೆ ಕರೆದುಕೊಂಡು ಹೋದನೆಂಬ ಪ್ರತೀತಿ ಈ ಕಾವ್ಯದಿಂದ ತಿಳಿದುಬರುತ್ತದೆ.
'ಬಲ್ಲಾಳರಾಯ' ಕಾವ್ಯದಲ್ಲಿ ಬಲ್ಲಾಳರಾಯ ತನ್ನ ಪತ್ನಿಯ ಸಮೇತವಾಗಿ ದಾಸೋಹ ಕಾರ್ಯವನ್ನು ಮಾಡುತ್ತಿದ್ದುದನ್ನು ಹೀಗೆ ವ್ಯಕ್ತಪಡಿಸಲಾಗಿದೆ.

"ಶಿರಬಾಗಿ ಶರಣು ಮಾಡಿ
ಅವರ ಕಷ್ಟಸುಖಗಳನೆಲ್ಲ
ಕೇಳಿ ಇಚಾರ್ಣೆ ಮಾಡಿ
ಅವ್ರು – ಕೇಳಿದ್ದನೆಲ್ಲ ಕೊಟ್ಟು
ಬೇಡಿದ್ದನ್ನೆಲ್ಲ ನೀಡಿ
ಗಂಡಹೆಂಡಿರಿಬ್ಬರೂ
ಬಂದ ಭಕ್ತರಿಗೆಲ್ಲ
ಮಾಡಿದಂತ ಅಡಿಗೆಯ
ಭಿನ್ಯವ ಅಳಿವರು
ಮಿಕ್ಕುದ ಪ್ರಾಸೋದವ
ರಾಜ ಬಲ್ಲಾಳರಾಯ
ತಾಯಿ ವಲ್ಲಬಮ್ಮ
ಗಂಡ ಹೆಂಡಿರಿಬ್ಬರು
ದ್ರೀಯಕೆ ಸಲ್ಲುಸುವರು"[೧೧]

ಇಲ್ಲಿ ಬಲ್ಲಾಳರಾಯ, ಹೆಂಡತಿ ವಲ್ಲಬಮ್ಮ ಸೇರಿಕೊಂಡು ಭಕ್ತರಿಗೆ ಪ್ರಸಾದವನ್ನು ಕೊಟ್ಟು ಅನಂತರ ಅವರು ಬೇಡಿದ್ದೆಲ್ಲವನ್ನು ಕೊಟ್ಟು, ಮಿಕ್ಕ ಪ್ರಸಾದವನ್ನು ತಾವು ಸ್ವೀಕರಿಸುತ್ತಿದ್ದರು. ಇದರಿಂದ ತಿಳಿಯುವುದೇನೆಂದರೆ ಭಕ್ತರೇ ದೇವರ ಸ್ವರೂಪರು ಅವರಿಗೆ ದಾಸೋಹವನ್ನು ಮಾಡುವುದು. ಅವರು ಸಂತೃಪ್ತರಾದ ಅನಂತರ ಮಿಕ್ಕ ಪ್ರಸಾದವನ್ನು ತಾವು ಸ್ವೀಕರಿಸುವ ಪದ್ಧತಿ ಶರಣ ಸಂಪ್ರದಾಯದಲ್ಲಿತ್ತೆಂಬುದನ್ನು ಈ ಕಾವ್ಯದಲ್ಲಿ ವ್ಯಕ್ತಪಡಿಸಿರುವುದನ್ನು ಕಾಣುತ್ತೇವೆ.
ಶಿವಶರಣನು ಗುರು ಲಿಂಗ ಜಂಗಮಕ್ಕೆ ಅನುಕ್ರಮವಾಗಿ ಅರ್ಪಿಸತಕ್ಕದ್ದು. ಹೀಗೆ ಅರ್ಪಿಸುವುದೇ ದಾಸೋಹಿಯ ಆಚರಣೆಯಾಗಿರುತ್ತದೆ. ತನು, ಮನ, ಧನಗಳ ಮೇಲಿನ ಆಶೆಯು ದೂರವಾಗಬೇಕೆಂಬುದೇ ಈ ದಾಸೋಹದ ಮುಖ್ಯ ಉದ್ದೇಶವಾಗಿದೆ. ಇಂಥ ಆಚರಣೆಯಿಂದ ಲಿಂಗ ಮನ ಭಾವಗಳಲ್ಲಿ ತ್ರಿಲಿಂಗಗಳು ಅಂದರೆ ಇಷ್ಟ, ಪ್ರಾಣ, ಭಾವಲಿಂಗಗಳು ಅನುಕ್ರಮವಾಗಿ ನೆಲೆಗೊಳ್ಳುತ್ತವೆ ಎಂಬುದು ಜನಪದ ಶರಣ ಕಾವ್ಯಗಳಿಂದ ತಿಳಿದುಬರುತ್ತದೆ.

**ಅಡಿ ಟಿಪ್ಪಣಿಗಳು**

೧. ರಾಜಶೇಖರ ಪಿ.ಕೆ. (ಸಂ): ಜನಪದ ಶರಣ ಕಾವ್ಯಗಳು; ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಬೆಂಗಳೂರು, ೨೦೧೦, ಪು.–೨೬, ಪದ್ಯ: ೬೨–೬೮

೨. ಅದೇ, ಪು.–೪೯, ಪದ್ಯ: ೧೧–೨೨
೩. ಅದೇ, ಪು.–೧೨೩, ಪದ್ಯ: ೩೦೩೩–೩೦೩೬
೪. ಅದೇ, ಪು.–೧೭೭, ಪದ್ಯ: ೭೮೪–೭೮೯
೫. ಅದೇ, ಪು.–೧೯೭, ಪದ್ಯ: ೩೪೯–೩೪೪
೬. ಅದೇ, ಪು.–೨೪೪, ಪದ್ಯ: ೩೮–೪೨
೭. ಅದೇ, ಪು.–೨೯೨, ಪದ್ಯ: ೧೦೩
೮. ಅದೇ, ಪು.–೩೬೪, ಪದ್ಯ: ೨೩೦–೨೩೩
೯. ಅದೇ, ಪು.–೪೧೮, ಪದ್ಯ: ೧೨೦–೧೨೩
೧೦. ಅದೇ, ಪು.–೪೭೫, ಪದ್ಯ: ೧೦೬೨–೧೦೭೮
೧೧. ಅದೇ, ಪು.–೪೮೩, ಪದ್ಯ: ೬೦–೭೩

**ಪರಾಮರ್ಶನ ಕೃತಿಗಳು**

೧. ರಾಜಶೇಖರ ಪಿ.ಕೆ. (ಸಂ): ಜನಪದ ಶರಣ ಕಾವ್ಯಗಳು; ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಬೆಂಗಳೂರು, ೨೦೧೦
೨. ಶಂಕರನಾರಾಯಣ ತೀ. ನಂ.: ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೨.
೩. ಅಕ್ಕೂರಮಠ ಷಣ್ಮುಖಯ್ಯಾ (ಸಂ): ವಚನಕಾರರ ಪ್ರಮುಖ ಪರಿಕಲ್ಪನೆಗಳು; ಶ್ರೀ ಸರ್ಪಭೂಷಣ ಶಿವಯೋಗೀಶ್ವರ ಮಠ, ಬೆಂಗಳೂರು, ೧೯೯೪
೪. ಕಲ್ಗುಡಿ ಬಸವರಾಜ: ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ; ಕನ್ನಡ ಸಾಹಿತ್ಯ ಪರಿಷತ್ತು, ೧೯೮೮
೫. ಶಾಮರಾಯ ತ.ಸು.: ಶಿವಶರಣರ ಕಥಾರತ್ನಕೋಶ; ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೬೭